

ಮಂಜಿನ ತೆಳು ಮುಸುಕಿನಲ್ಲಿ ಮೌಂಟ್ ಕೀನ್ಯಾ



ಮೌಂಟ್ ಕೀನ್ಯಾ ವನ್ಯಜೀವಿ ಸಂರಕ್ಷಣೆಯಲ್ಲಿರುವ ಪ್ರಾಣಿಗಳು

ಬಂದೆವು. ಅಲ್ಲಿರುವ ಪ್ರಾಣಿಗಳ ಅನಾಥಾಶ್ರಮದ ಬಾಗಿಲು ಪ್ರವೇಶಿಸುತ್ತಿದ್ದಂತೆಯೇ, ಅಲ್ಲಿನ ಪ್ರಾಣಿಗಳ ಆಹಾರಕ್ಕಾಗಿ ಕೆಲ ತರಕಾರಿಗಳನ್ನು ಬೆಳೆದಿರುವುದನ್ನು ನೋಡಬಹುದು. ಮೌಂಟ್ ಕೀನ್ಯಾ ವನ್ಯಜೀವಿ ಸಂರಕ್ಷಣೆಯನ್ನು 1967ರಲ್ಲಿ ಹಾಲಿವುಡ್ ನಟ ವಿಲಿಯಮ್ ಹೋಲ್ಡೆನ್, ಜ್ಯೂಲಿಯನ್ ಮ್ಯಾಕ್ ಕಿಯಾಂಡ್, ಐರಿಸ್ ಮತ್ತು ಡಾನ್ ಹಂಟ್ ಸ್ಥಾಪಿಸಿದರು. ಇದು ಮೌಂಟ್ ಕೀನ್ಯಾ ಗೇಮ್ ರಾಂಚ್ ಆಗಿ ಜೀವನವನ್ನು ಪ್ರಾರಂಭಿಸಿತು. ಅನಾಥ, ಗಾಯಗೊಂಡ, ನಿರ್ಲಕ್ಷ್ಯ ಕಾಡುಪ್ರಾಣಿಗಳನ್ನು ಮೌಂಟ್ ಕೀನ್ಯಾ ವನ್ಯಜೀವಿ ಸಂರಕ್ಷಣೆ ಇಲ್ಲಿಗೆ ತಂದು ಪೋಷಿಸುತ್ತಿದೆ.

ಅನಾಥಾಶ್ರಮಗಳು ಜಗತ್ತಿನೆಲ್ಲೆಡೆ ಇವೆ. ಆದರೆ, ಈ ಅನಾಥಾಶ್ರಮಕ್ಕೆ ತನ್ನದೇ ಆದ ವಿಶಿಷ್ಟತೆಯಿದೆ. ಇಲ್ಲಿ ಪ್ರಾಣಿ ಪಕ್ಷಿಗಳನ್ನು ಕಬ್ಬಿಣದ ಸರಳುಗಳ ಪಂಜರದೊಳಗೆ ಬಂಧಿಸದೇ ತಾವೇ ಹುಟ್ಟಿ ಬೆಳೆದ ಪರಿಸರವನ್ನು ಸೃಷ್ಟಿಸಿ, 'ಅವು ಇಲ್ಲಿಯೇ ಹುಟ್ಟಿ ಬೆಳೆದಿರಬಹುದೇ' ಎಂಬ ಅನುಮಾನವನ್ನು ನೋಡುಗರಲ್ಲಿ ಮೂಡಿಸುತ್ತವೆ. ಉದಾಹರಣೆಗೆ, ಬೊಂಗೊ, ಉಷ್ಟ್ರಪಕ್ಷಿ, ಲಾಮಾ, ಮುಳ್ಳುಹಂದಿ, ನೀರಾನೆ ಮುಂತಾದವು. ಅವುಗಳ ಜೊತೆ ಪ್ರವಾಸಿಗರು ಸ್ವಚ್ಛಂದವಾಗಿ ವಿಹರಿಸಬಹುದು. ಚಿರತೆಯನ್ನು ಬಹಳ ಹತ್ತಿರದಿಂದ ನೋಡಬಹುದು. ಈ ಅಪಾಯಕಾರಿ ಪ್ರಾಣಿಗಳಿಗೂ ತನ್ನದೇ ಆದ ನೈಜ ನೆಲೆಯಂತೆ ಗುಹೆಗಳನ್ನು ಸೃಷ್ಟಿಸಿದ್ದಾರೆ.

ಈ ಅನಾಥಾಶ್ರಮದಲ್ಲಿ ಮುಗ್ಧ ಜೀವಿಗಳ ಬಗ್ಗೆ ಮಾನವನಲ್ಲಿ ಅರಿವನ್ನು ಮೂಡಿಸುವ, ಅವುಗಳ ಕ್ರಿಯಾಶೀಲತೆ ಬಗ್ಗೆ ಪ್ರದರ್ಶನಗಳನ್ನು ಏರ್ಪಡಿಸುವ ಕಾರ್ಯಕ್ರಮಗಳೂ ನಡೆಯುತ್ತವೆ. ಇದಲ್ಲದೆ ಪ್ರಾಣಿ ಮತ್ತು ಪಕ್ಷಿಗಳಿಗೆ ಪ್ರವಾಸಿಗರು ಖುದ್ದು ಆಹಾರ ಉಣಬಡಿಸಬಹುದು. ಅನಾಥಾಶ್ರಮದ ಸುತ್ತಲೂ ಮೌಂಟ್ ಕೀನ್ಯಾ ರಾಷ್ಟ್ರೀಯ ಉದ್ಯಾನವನವಿದ್ದು ಸಫಾರಿಗೆ ಹೋಗಬಹುದು. ಇಲ್ಲಿ ಪ್ರಾಣಿ ಪಕ್ಷಿಗಳಿಗೆ ಬೇಲಿ ಹಾಕದೆ ಮುಕ್ತವಾಗಿ ಓಡಾಟಕ್ಕೆ ಅನುವು ಮಾಡಿಕೊಟ್ಟಿರುವುದು ವಿಶೇಷ.

ಮರುದಿನ ಬೆಳಗ್ಗೆ ನಾನ್ಯೂಕಿಯಿಂದ 50 ಕಿ.ಮೀ. ದೂರದ ಗಾರೆ ಡಾರೆ ಅರಣ್ಯಕ್ಕೆ ಹೊರಟೆವು. ಕಾರುಗಳು ಸುಮಾರು 45 ಕಿ.ಮೀ. ಚಲಿಸಿ, ನಂತರ ಮುಖ್ಯ ರಸ್ತೆ ಬಿಟ್ಟು ಸ್ವಲ್ಪ ಅಡ್ಡ ರಸ್ತೆ ಹಿಡಿದವು. ಅಲ್ಲಿ ನಮ್ಮನ್ನು ದೈತ್ಯ ದೂಳು ಆವರಿಸಿತು. 10 ನಿಮಿಷಗಳಲ್ಲಿ ತಲುಪಬೇಕಾದ ಸ್ಥಳಕ್ಕೆ ಒಂದೂವರೆ ತಾಸಿಗೂ ಹೆಚ್ಚು ಸಮಯ ತೆಗೆದುಕೊಂಡಿತು. ಕಾಡಿನಲ್ಲಿನ ಮಣ್ಣಿನ ರಸ್ತೆಗಳು, ಬೆಟ್ಟ ಗುಡ್ಡ, ಇಳಿಜಾರು ಪ್ರದೇಶಗಳಲ್ಲಿ ನಿಧಾನವಾಗಿ ಚಲಿಸುತ್ತಾ ಅಂತೂ ಕೊನೆಗೆ ಅರಣ್ಯದ ಮುಖ್ಯ ಆಕರ್ಷಣೆಯಾದ ಅಲುಗಾಡುವ ಸೇತುವೆ (ಕನೋಪಿ) ಇರುವ ಸ್ಥಳಕ್ಕೆ ಬಂದೆವು. 10 ಮೀಟರ್ ಎತ್ತರ ಮತ್ತು 500 ಮೀಟರ್ ಉದ್ದವಿರುವ ಇದು ಪೂರ್ವ ಆಫ್ರಿಕಾದಲ್ಲೇ ಅತ್ಯಂತ ಉದ್ದ ಮತ್ತು ಎತ್ತರವಾದ ಮೇಲಾವರಣವಾಗಿದೆ. ನಾವು ನಡೆಯುವಾಗ ಕೆಳಗೆ ಹರಿಯುವ ನದಿಯನ್ನು ನೋಡಿ ಆನಂದಿಸಬಹುದು. ವನ್ಯಜೀವಿಗಳನ್ನು ವೀಕ್ಷಿಸಬಹುದು. ಆನೆಗಳು ಮತ್ತು ಕಾಡೆಮ್ಮೆಗಳು ಆಗಾಗ್ಗೆ ಇಲ್ಲಿ ನೀರು ಕುಡಿಯಲು ಮತ್ತು ವಿಶ್ರಮಿಸಲು ಬರುತ್ತವೆ.

ಗಾರೆ ಡಾರೆ ಅರಣ್ಯವು ಉತ್ತರ ಕೀನ್ಯಾದ ಒಂದು ಗುಪ್ತರತ್ನವೆಂದು ಹೇಳಬಹುದು. ಇದು ಮೌಂಟ್ ಕೀನ್ಯಾದ ಉತ್ತರ ತಪ್ಪಲಿನಲ್ಲಿ ಮೇರು ಪಟ್ಟಣದಿಂದ 45 ಕಿ.ಮೀ. ದೂರದಲ್ಲಿದ್ದು, ಉತ್ತರ ಕೀನ್ಯಾದ ಮೇರು ಮತ್ತು ಲೈಕಿಪಿಯಾ ಎರಡು ರಾಜ್ಯಗಳಿಗೂ ಹೊಂದಿಕೊಂಡಿದೆ. ಲೈವಾ ಮತ್ತು ಬೋರಾನಾಗಳ ಗಡಿಯುದ್ದಕ್ಕೂ ಅರಣ್ಯವು ಚಾಚಿಕೊಂಡಿದೆ. ಈ ಅರಣ್ಯದ ವಿಸ್ತೀರ್ಣ ಸುಮಾರು 5,545 ಹೆಕ್ಟೇರ್‌ಗಳು. ಗಾರೆ–ಡಾರೆ ಈ ಎರಡು ಮಸಾಯಿ ಭಾಷೆಯ ಪದಗಳು. ಗಾರೆ ಎಂದರೆ 'ನೀರು', ಡಾರೆ ಎಂದರೆ 'ಆಡುಗಳು'. ಮಸಾಯಿ ಭಾಷೆಯಲ್ಲಿ ಆಡುಗಳು ನೀರನ್ನು ಕುಡಿಯುವ ಸ್ಥಳ ಎಂದರ್ಥ.

ಈ ಅರಣ್ಯ ಪ್ರದೇಶದಲ್ಲಿ ಮೇರು, ಮಸಾಯಿ, ಬೊರಾನಾ ಮತ್ತು ಕಿಕುಯು ಸಮುದಾಯಗಳು ಇವೆ. ಈ ಅರಣ್ಯವು ವಿವಿಧ ಜಾತಿಯ ಸ್ಥಳೀಯ ಸಸ್ಯಗಳನ್ನು ಹೊಂದಿವೆ. ಅವುಗಳಲ್ಲಿ ಕೆಲವು ಗಿಡಮೂಲಿಕೆಗಳನ್ನು ಆರೋಗ್ಯ ಸಮಸ್ಯೆ ನಿವಾರಣೆಗೆ ಉಪಯೋಗಿಸುತ್ತಾರೆ. ಪ್ರಬಲ ಜಾತಿಯ ಮರಗಳೆಂದರೆ – ಜುನಿಪೆರಸ್ ಪ್ರೊಸೆರಾ ಮತ್ತು ಒಲಿಯಾ ಎರಿಕಾನಾ. ಈ ಅರಣ್ಯವನ್ನು ಸಂರಕ್ಷಿಸಲು ಕೀನ್ಯಾ ಅರಣ್ಯ ಸೇವೆ ಮತ್ತು ಗಾರೆ ಡಾರೆ ಅರಣ್ಯ ಟ್ರಸ್ಟ್ ಜಂಟಿಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕಾಡಿನಲ್ಲಿಯೇ ಒಂದು ಸುಂದರ ಜಲಪಾತವೂ ಇದೆ. ದುರದೃಷ್ಟವೆಂದರೆ, ಸಮಯದ ಅಭಾವದಿಂದಾಗಿ ಅಲ್ಲಿಗೆ ಹೋಗಲು ನಮಗೆ ಸಾಧ್ಯವಾಗಲಿಲ್ಲ.

ಈ ಅರಣ್ಯ ಪ್ರದೇಶ ಅನನ್ಯವಾದ ನೈಸರ್ಗಿಕ ಸೌಂದರ್ಯದ ತಾಣ. ಪ್ರವಾಸಿಗರ ವಿಶೇಷ ಮತ್ತು ವೈವಿಧ್ಯಮಯ ಅಗತ್ಯಗಳನ್ನು ಪೂರೈಸಲು ರೋಮಾಂಚಕ ಮತ್ತು ಉತ್ತೇಜಕ ಅನುಭವವನ್ನು ನೀಡುತ್ತದೆ ಮತ್ತು ಸ್ಮರಣೀಯವಾಗಿದೆ. ಸಾಹಸಿಗಳಿಗೆ, ಪರಿಸರ ಪ್ರೇಮಿಗಳಿಗೆ ಇದೊಂದು ಪರಿಪೂರ್ಣ ಸ್ಥಳವಾಗಿದೆ. ■

## ಕೀನ್ಯಾದ ಮೇರು

ಮೌಂಟ್ ಕೀನ್ಯಾ, ಕೀನ್ಯಾದ ಅತೀ ಎತ್ತರದ ಪರ್ವತವಾಗಿದ್ದು ಸುಮಾರು 5,199 ಮೀಟರ್ ಎತ್ತರವಿದೆ.

ಆಫ್ರಿಕಾದಲ್ಲಿ ಕಿಲಿಮಂಜಾರೊವಿನ ನಂತರ ಎರಡನೆಯ ಅತಿ ಎತ್ತರದ ಪರ್ವತವಾಗಿದೆ. ಪರ್ವತ ಕೇಂದ್ರದ ಸುತ್ತ ಸುಮಾರು 276 ಚದರ ಮೈಲಿಯಷ್ಟು ಪ್ರದೇಶವನ್ನು, ರಾಷ್ಟ್ರೀಯ ಉದ್ಯಾನವನ ಎಂದು ಗುರುತಿಸಲಾಗಿದೆ. ಈ ಉದ್ಯಾನವನದ ಸಹಜ ಸೌಂದರ್ಯ ಸವಿಯಲೆಂದು ಪ್ರತಿ ವರ್ಷ 16 ಸಾವಿರಕ್ಕೂ ಅಧಿಕ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ.

ಪರ್ವತದಲ್ಲಿ 11ಕ್ಕೂ ಹೆಚ್ಚು ಹಿಮನದಿಗಳಿದ್ದು, ಅರಣ್ಯದ ಇಳಿಜಾರುಗಳು ಕೀನ್ಯಾದ ಹೆಚ್ಚಿನ ಭಾಗಕ್ಕೆ ನೀರಿನ ಮುಖ್ಯ ಮೂಲವಾಗಿವೆ. ಇಲ್ಲಿನ ಜನರೂ